ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Special Issue-3, March - April 2026, Pp. 20-25
©*IIMRD*, Mysuru
IIMRD JOURNALS
www.iimrd.com

# ಹುಯಿಲಗೋಳ ನಾರಾಯಣರಾವ್‌ರವರ ಬಹುಮುಖ ಪ್ರತಿಭೆ ಅನಾವರಣ

**ಡಾ. ಲೋಕೇಶ**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು

**ಸಾರಾಂಶ: (Abstract)**

*ಭವ್ಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯುಳ್ಳ ಆಧುನಿಕ ಕರ್ನಾಟಕದ ನಿರ್ಮಾಣದಲ್ಲಿ ಪಾತ್ರವಹಿಸಿದ ಮಂದಿ ಹಲವರು. ಅವರೆಲ್ಲರ ತ್ಯಾಗ ಮತ್ತು ಬಲಿದಾನ ಶ್ರಮ ಮತ್ತು ಸಾಧನೆಗಳ ಪರಿಣಾಮವಾಗಿ ಕನ್ನಡ ನಾಡು ಇಂದು ಒಂದಾಗಿದೆ. ಐಕ್ಯ ಕರ್ನಾಟಕದ ಕನಸು ನನಸಾಗಿದೆ ಹೀಗೆ ಆಧುನಿಕ ಕರ್ನಾಟಕದ ನಿರ್ಮಾಣ ಕಾರ್ಯದಲ್ಲಿ ಮಂಚೂಣಿಯಲ್ಲಿದ್ದು ಸೇವೆ ಸಲ್ಲಿಸಿದ ಹಲವಾರು ನಾಯಕರು ಪ್ರಾತಃಸ್ಮರಣೀಯರು ಚಿರಸ್ಮರಣೆಯರು ಆಗಿದ್ದಾರೆ. ಅವರಲ್ಲಿ ಕೆಲವರ ವೃತ್ತಾಂತವನ್ನು ತಿಳಿದುಕೊಳ್ಳುವುದು ಅತ್ಯವಶ್ಯಕವಾಗಿದೆ. ಇದರ ಉದ್ದೇಶ ಅವರ ಸೇವೆ ನಿಷ್ಠೆ ತ್ಯಾಗ ಬಲಿದಾನ ಮತ್ತು ಸಾಧನೆಗಳು ಭವಿಷ್ಯದ ಜನಾಂಗಕ್ಕೆ ನಾಡು ಕಟ್ಟುವಲ್ಲಿ ಸ್ಪೂರ್ತಿ ಮತ್ತು ಮಾರ್ಗದರ್ಶನ ನೀಡಲಿ ಎಂಬುದು.*

**ಮುಖ್ಯಪದಗಳು (Keywords):** *ಕರ್ನಾಟಕ ಇತಿಹಾಸ, ಆಧುನಿಕ ಕರ್ನಾಟಕ, ಹುಯಿಲಗೋಳ ನಾರಾಯಣರಾವ್*

**ಪೀಠಿಕೆ**

ರಾಷ್ಟ್ರ ಕವಿಗಳಾದ ಶ್ರೀ ಕುವೆಂಪು ವಿರಚಿತ ಜಯ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ ಎನ್ನುವ ಗೀತೆ ನಮ್ಮ ನಾಡ ಗೀತೆ ಎನ್ನುವುದು ಎಲ್ಲಾ ಕನ್ನಡಿಗರಿಗೂ ತಿಳಿದ ವಿಷಯವಾಗಿದ್ದು, ಇದೇ ನಾಡಗೀತೆಯನ್ನು ಪ್ರತೀ ದಿನವೂ ಶಾಲಾ ಕಾಲೇಜುಗಳಲ್ಲಿ ಹಾಡಲಾಗುತ್ತದೆ. ಆದರೆ ಸ್ವಾತ್ರಂತ್ರ್ಯ ಪೂರ್ವದಲ್ಲಿ ಕುವೆಂಪು ಅವರ ನಾಡಗೀತೆ ರಚನೆ ಆಗುವ ಮುನ್ನ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಎಂಬ ಹಾಡು ಅವಿಭಜಿತ ಕರ್ನಾಟಕದಲ್ಲಿ ಬಹಳ ಪ್ರಖ್ಯಾತವಾಗಿತ್ತು. ಅದೇ ಗೀತೆ ನಾಡಗೀತೆಯಾಗಿತ್ತು. ಅಂತಹ ಸುಶ್ರಾವ್ಯವಾದ ಮತ್ತು ಕನ್ನಡಿಗರನ್ನು ಜಾಗೃತಗೊಳಿಸುವ ಗೀತೆಯನ್ನು ರಚಿಸಿದ್ದ ಶ್ರೇಷ್ಠ ಕವಿ, ಶ್ರೇಷ್ಠ ನಾಟಕಕಾರರೂ, ನಟರೂ, ಚಿಂತಕರೂ ಹಾಗೂ ಸ್ವಾತಂತ್ರ್ಯ ಹೋರಾಟಗಾರರಾಗಿದ್ದಂತಹ ಬಹುಮುಖ ಪ್ರತಿಭೆಯ ಮೇರು ವ್ಯಕ್ತಿ ಶ್ರೀಯುತ ಹುಯಿಲಗೋಳ ನಾರಾಯಣರಾಯರ ಪರಿಚಯವನ್ನು ಈ ಲೇಖನದಲ್ಲಿ ನೀಡಲಾಗಿದೆ.

ಹುಯಿಲಗೋಳ ನಾರಾಯಣರಾವ್ ಅವರು ಕವಿ, ಸಾಹಿತಿ, ನಾಟಕ ರಚನೆಯ ಮೂಲಕ ನಾಡಿನಾದ್ಯಂತ ಗುರುತಿಸಿಕೊಂಡವರು. ಇಂದಿಗೂ ಕನ್ನಡ ಸಾಹಿತ್ಯ ಲೋಕದ ದಿಗ್ಗಜರಲ್ಲಿ ಒಬ್ಬರು.

*Please cite this article as:* ಲೋಕೇಶ. (2026). ಹುಯಿಲಗೋಳ ನಾರಾಯಣರಾವ್‌ರವರ ಬಹುಮುಖ ಪ್ರತಿಭೆ ಅನಾವರಣ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ.* 20–25

ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಎಂಬ ಗೀತೆಯನ್ನು ರಚಿಸಿದಂತಹ ಪ್ರಸಿದ್ಧ ಕವಿಯಾದ ಗದುಗಿನ ವೀರನಾರಾಯಣ, ಹುಯಿಲಗೋಳ ನಾರಾಯಣರಾವ್ ಅವರು ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅವಿಸ್ಮರಣೀಯ.

**ಹುಯಿಲಗೋಳ ನಾರಾಯಣರಾವ್ (1884 ರಿಂದ 1971)**

ಹುಯಿಲಗೋಳ ನಾರಾಯಣರಾವ್ ಇವರ ಪೂರ್ಣ ಹೆಸರು ನಾರಾಯಣರಾವ್ ಕೃಷ್ಣರಾವ್ ಹುಯಿಲಗೋಳ. ಇವರ ಹುಟ್ಟೂರು ಗದಗ್. ಅಲ್ಲಿನ ವೀರನಾರಾಯಣ ಇವರ ಆರಾಧ್ಯ ದೈವ. ಇವರ ಹಿರಿಯರು ಬಳ್ಳಾರಿಯವರು. ತಂದೆ ಕೃಷ್ಣರಾಯರು ತಾಯಿ ಉಮಚಗಿ ಮನೆತನದವರು. ಹುಯಿಲಗೋಳ ನಾರಾಯಣರಾವ್ ರವರ ಪ್ರಾಥಮಿಕ ವಿದ್ಯಾಭ್ಯಾಸ ಗದುಗಿನಲ್ಲಿ ಆಯಿತು. ಮಾಧ್ಯಮಿಕ ಶಿಕ್ಷಣ ಗದಗ್, ಗೋಕಾಕ ಮತ್ತು ಧಾರವಾಡಗಳಲ್ಲಿ ನಡೆಯಿತು. ವಿದ್ಯಾರ್ಥಿಯ ದೆಸೆಯಲ್ಲಿಯೇ ಇವರ ಒಲವು ನಾಟಕದ ಕಡೆಗಿತ್ತು. ಮಾಧ್ಯಮಿಕ ಶಾಲೆಯಲ್ಲಿ ತಮ್ಮೊಡಗೂಡಿ ಗರುಡ ಗರ್ವಭಂಗ ಎಂಬ ನಾಟಕವನ್ನು ಆಡಿದ್ದರು. ಮುಂದೆ ಪುಣೆಯ ಪರ್ಗುಸನ್ ಕಾಲೇಜಿನಲ್ಲಿ ಪ್ರೌಢ ಶಿಕ್ಷಣ ಅಭ್ಯಾಸವನ್ನು ಮುಂದುವರಿಸಿದರು. ಬಂಗಾಳದ ವಿಭಜನೆಯ ಕಾಲದಲ್ಲಿ (1905) ನಡೆದ ಚಳುವಳಿ ಇವರಲ್ಲಿ ರಾಷ್ಟ್ರೀಯತೆಯ ಸ್ವಾಭಿಮಾನದ ಸ್ವಾತಂತ್ರ್ಯದ ಉತ್ಸಾಹವನ್ನು ಮೂಡಿಸಿತು. ಕಾಲೇಜು ಶಿಕ್ಷಣವನ್ನು ಮುಗಿಸಿದ ಇವರು ಕೆಲವು ಕಾಲ ಶಿಕ್ಷಕರಾಗಿ ಕೆಲಸ ಮಾಡಿ ಆನಂತರ ನ್ಯಾಯಶಾಸ್ತ್ರವನ್ನು ಓದಿ L.L.B ಮುಗಿಸಿ ವಕೀಲರಾದರು ಇದೆ ಅವರ ಜೀವನದ ವೃತ್ತಿಯಾಯಿತು.

**ಅಧ್ಯಯನದ ಉದ್ದೇಶಗಳು**

- ಹುಯಿಲಗೋಳ ನಾರಾಯಣರಾವ್ ಅವರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ತಿಳಿಯುವುದು.
- ಹುಯಿಲಗೋಳ ನಾರಾಯಣರಾವ್ ಅವರು ಜೀವನ ಚರಿತ್ರೆ ಹಾಗೂ ಅವರ ಸಾಧನೆಗಳ ಬಗ್ಗೆ ಅರಿಯುವುದು.
- ಹುಯಿಲಗೋಳ ನಾರಾಯಣರಾವ್ ಅವರ ಕನ್ನಡ ದೇಶಾಭಿಮಾನದ ಬಗ್ಗೆ ಅರ್ಥ ಮಾಡಿಕೊಳ್ಳುವುದಾಗಿದೆ.

**ಅಧ್ಯಯನದ ಸಂಶೋಧನಾ ವಿಧಾನ**

ಪ್ರಸ್ತುತ ಸಂಶೋಧನಾ ಲೇಖನವನ್ನು ದ್ವಿತೀಯ ಮೂಲಗಳಾದ ಪುಸ್ತಕಗಳು, ಜರ್ನಲ್ಸ್‌ಗಳು, ದಿನಪತ್ರಿಕೆಗಳು ಹಾಗೂ ಅಂತರ್ಜಾಲದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಪ್ರಸ್ತುತ ಸಂಶೋಧನಾ ಲೇಖನವನ್ನು ವಿವರಣಾತ್ಮಕ ವಿಧಾನದ ಮೂಲಕ ವಿಶ್ಲೇಷಣೆ ಮಾಡಲಾಗಿದೆ.

**ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ**

ಹುಯಿಲಗೋಳ ನಾರಾಯಣರಾವ್ ಅವರು ಸಾಹಿತ್ಯ ಕ್ಷೇತ್ರದಲ್ಲಿ ಆಸಕ್ತಿ ಹೊಂದಿದ್ದರು. ನಾರಾಯಣರಾಯರು ಮೂಲತಃ ನಾಟಕಕಾರರು, ಕನ್ನಡ ರಂಗಭೂಮಿಗಾಗಿ ಕಾಲ್ಪನಿಕ, ಐತಿಹಾಸಿಕ,

ಪೌರಾಣಿಕ, ಸಾಮಾಜಿಕ ಹೀಗೆ ವಿವಿಧ ಬಗೆಯ ನಾಟಕಗಳನ್ನು ರಚಿಸಿ ಪ್ರದರ್ಶಿಸಿದರು. ಇವರು ಅನೇಕ ಕವನಗಳು ಅಂದಿನ ಪತ್ರಿಕೆಗಳಾದ ಜೈ ಕರ್ನಾಟಕ ವೃತ್ತ, ಪ್ರಭಾತ, ಧನಂಜಯ ಸೇರಿದಂತೆ ಬಹುತೇಕ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿತ್ತು. ಜೊತೆಗೆ ನಾರಾಯಣರಾಯರು ತಮ್ಮ ನಾಟಕಗಳಿಗಾಗಿ ಗೀತೆಗಳನ್ನೂ ರಚಿಸುತ್ತಿದ್ದರು. ನಾರಾಯಣರಾಯರು 'ಮೂಡಲು ಹರಿಯಿತು' ಎಂಬ ಕಾದಂಬರಿಯನ್ನೂ ಬರೆದಿದ್ದರು.[1]

"ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಗೀತೆಯನ್ನು ಕೇಳದ ಕನ್ನಡಿಗರೇ ಇಲ್ಲ. ಈ ಹಾಡು ಕನ್ನಡಿಗರ ನರ ನಾಡಿಗಳಲ್ಲಿ ಶಾಶ್ವತವಾಗಿ ನೆಲೆಯೂರಿ ಬಿಟ್ಟಿದೆ. ಕಾಳಿಂಗರಾಯರ ಧ್ವನಿಯಲ್ಲಿ ಹೊರ ಹೊಮ್ಮಿದ ಈ ಹಾಡನ್ನು ಕನ್ನಡಿಗರು ಮರೆಯುವಂತೆಯೇ ಇಲ್ಲ. ಇದೇ ಹಾಡು ಡಾ. ಭೀಮಸೇನ ಜೋಷಿ ಮತ್ತು ಕೃಷ್ಣ ಹಾನಗಲ್ ಅವರ ದ್ವನಿಯಲ್ಲೂ ಸೊಗಸಾಗಿ ಮೂಡಿ ಬಂದಿದೆ. ಈ ಹಾಡಿನ ಕರ್ತೃ ಹುಯಿಲಗೋಳ ನಾರಾಯಣರಾಯರು.

ಶುಭ್ರ ಖಾದಿ ಧೋತರ, ಖಾದಿ ಶರ್ಟು, ಕೊರಳನ್ನು ಬಿಗಿಯಾಗಿ ಸುತ್ತಿಕೊಂಡಂತಿದ್ದ ತುಂಬು ತೋಳಿನ ಖಾದಿ ಜೋಧಪುರಿ ಕೋಟು, ಇನ್ನು ತಲೆ ಮೇಲೆ ಅಂದವಾಗಿ ಸುತ್ತಿದ ಖಾದಿ ರುಮಾಲು, ಹೆಗಲ ಮೇಲೊಂದು ಬಿಳಿ ಶಲ್ಯ ಹೊದ್ದು ಬಹಳ ಸರಳ ಜೀವಿಯಾಗಿದ್ದ ನಾರಾಯಣರಾಜರು ಹೆಸರಿಗಷ್ಟೇ ವಕೀಲರಾದರೂ. ಅವರಲ್ಲಿದ್ದ ದೇಶಾಭಿಮಾನ, ಕನ್ನಡಾಭಿಮಾನ ಸಹಜವಾಗಿ ಆವರನ್ನು ಸ್ವಾತ್ರಂತ್ರ್ಯ ಚಳುವಳಿಯತ್ತ ಕರೆದೊಯ್ಯಿತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸುತ್ತಲೇ, ದೇಶಾಭಿಮಾನ ಹೆಚ್ಚಿಸುವ ಕೆಲಸಕ್ಕಾಗಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ತಮ್ಮ ಸಾಹಿತ್ಯವನ್ನು ಅದ್ಭುತವಾಗಿ ಬಳಸಿಕೊಂಡ ರಾಯರು, ತಮ್ಮ ಲೇಖನಗಳು ಮತ್ತು ನಾಟಕಗಳ ಮೂಲಕ ಜನ ಜಾಗೃತಿಯನ್ನು ಮಾಡಿದ್ದಲ್ಲದೇ, ನಮ್ಮ ನಾಟ್ಯ ವಿಲಾಸಿ ಮಿತ್ರರ ಸಹಕಾರದೊಂದಿಗೆ ಗದುಗಿನ ವಿದ್ಯಾದಾನ ಸಮಿತಿಯ ಪ್ರೌಢಶಾಲೆ ಸ್ಥಾಪನೆ ಮಾಡಿದ್ದಲ್ಲದೇ, ಯಂಗ್ ಮೆನ್ಸ್ ಫುಟ್ಬಾಲ್ ಕ್ಲಬ್ ಸ್ಥಾಪಿಸಿ ಕ್ರೀಡೆಗೂ ಪ್ರೋತ್ಸಾಹ ನೀಡುತ್ತಲೇ ಸಮಾಜಕ್ಕೆ ಹತ್ತಿರವಾಗ ತೊಡಗಿದರು. ಇನ್ನು ಜನರನ್ನು ಒಗ್ಗೂಡಿಸುವ ಸಲುವಾಗಿ ವಸಂತೋತ್ಸವ, ನಾಡಹಬ್ಬ, ಪುಸ್ತಕ ಬಿಡುಗಡೆ, ಕಾವ್ಯ ವಾಚನ, ಸಾಹಿತ್ಯ ಸಮ್ಮೇಳನಗಳನ್ನು ನಡೆಸಿದ್ದಲ್ಲದೇ, ಗದುಗಿನ ಎರಡು ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ನಾಯಕತ್ವವಹಿಸುವ ಮೂಲಕ ಆಸ್ತಿಕರನ್ನೂ ಸ್ವಾತ್ರಂತ್ರ್ಯ ಚಳುವಳಿಯತ್ತ ಕರೆತಂದರು.

1908ರಲ್ಲಿ ಕನ್ನಡ ಮನಸ್ಥಿತಿ ಎಂಬ ಇವರ ಒಂದು ಕವನ ಕರ್ನಾಟಕ ವೃತ್ತದಲ್ಲಿ ಪ್ರಕಟವಾಯಿತು. ವಕೀಲಿ ವೃತ್ತಿಯನ್ನು ಕೈಗೊಂಡ ಮೇಲೆ ಇವರು ನಾಟಕದ ಗೀಳನ್ನು ಹೆಚ್ಚಿಸಿಕೊಂಡರು. ಗದುಗಿಗೆ ಬರುವ ನಾಟಕಗಳನ್ನು ನೋಡಿ ತಾವೇ ಏಕೆ ನಾಟಕ ರಚಿಸಿ ಆಡಿಸಬಾರದು ಎಂದು ಯೋಚಿಸಿದರು. ಇವರು ಬರೆದ ಮೊದಲ ನಾಟಕ ವಜ್ರಮಕುಟ ಅದನ್ನು ರಂಗಸ್ಥಳಕ್ಕೆ ತರಲು ಸ್ವಲ್ಪ ತೊಂದರೆ ಆಯಿತು. ಆದರೆ ಉಮಚಗಿ ಸೀನಪ್ಪ ನಾಯಕರ ಬೆಂಬಲದಿಂದ ಅದು ರಂಗಮಂಟಪವನ್ನು ಹತ್ತಿದ್ದು ಅಲ್ಲದೆ ಯಶಸ್ವಿಯು ಆಯಿತು. ಈ ಯಶಸ್ಸು ಇವರ ಮುಂದಿನ ನಾಟಕಗಳ ರಚನೆಗೆ ಅಡಿಪಾಯವಾಯಿತು.

---

[1] https://vskkarnataka.org/huyilagol-narayan-rao-jayanthi-2024/

ಪ್ರೇಮಾರ್ಜುನ 1912ರಲ್ಲಿ, ಕವನ ವಿಲಾಸ 1913, ಮೋಹನ ಹರಿ 1914, ಅಜ್ಞಾತವಾಸ 1915, ಪ್ರೇಮ ವಿಜಯ 1916, ರಾಮಕುಮಾರ, 1918, ವಿದ್ಯಾರಣ್ಯ 1921 ಮೊದಲಾದ ಐತಿಹಾಸಿಕ ನಾಟಕಗಳನ್ನು ಹಾಗೂ ಭಾರತ ಸಂಧಾನ 1918 ರಲ್ಲಿ ಉತ್ತರ ಗೋ ಗ್ರಹಣ 1922 ಎಂಬ ಪೌರಾಣಿಕ ನಾಟಕಗಳನ್ನು, ಸ್ತ್ರೀ ಧರ್ಮ ರಹಸ್ಯ 1914, ಶಿಕ್ಷಣ ಸಂಭ್ರಮ 1920, ಪತಿತೋದ್ಧಾರ 1925, ಎಂಬ ಸಾಮಾಜಿಕ ನಾಟಕಗಳನ್ನು ಇವರು ಬರೆದರು. ಇವರ ಎಲ್ಲಾ ನಾಟಕಗಳು ರಂಗದ ಮೇಲೆ ಪ್ರದರ್ಶಿತವಾಗಿ ಇವರಿಗೆ ಯಶಸ್ಸನ್ನು ಹಣವನ್ನು ತಂದುಕೊಟ್ಟವು. ಆದರೆ ಈ ಹಣವನ್ನ ಇವರ ಸ್ವಂತಕ್ಕೆ ಉಪಯೋಗಿಸಿಕೊಳ್ಳಲಿಲ್ಲ. ಶಿಕ್ಷಣ ಪ್ರಿಯರಾದ ಇವರು ಒಂದು ಸಮಿತಿಯನ್ನ ರಚಿಸಿ ಆ ಹಣವನ್ನೆಲ್ಲ ವಿದ್ಯಾಭಿವೃದ್ಧಿಗಾಗಿ ದಾನ ಮಾಡಿದರು. ಈ ಸಂಸ್ಥೆ ಇಂದಿಗೂ ನಡೆದುಕೊಂಡು ಬರುತ್ತಿದೆ. ಇವರು ಸ್ವಾತಂತ್ರ್ಯ ಚಳುವಳಿಯಲ್ಲಿಯೂ ಭಾಗವಹಿಸಿದರು. ಬೆಳಗಾವಿಯಲ್ಲಿ 1924ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಕರ್ನಾಟಕದ ಪರವಾಗಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ರಾಷ್ಟ್ರ ಪ್ರೇಮವನ್ನು ತೋರಿದರು.

**ಪ್ರಥಮ ಏಕೀಕರಣ ಸಮ್ಮೇಳನ**

1924ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಕರ್ನಾಟಕ ಏಕೀಕರಣ ಚಳುವಳಿಗೆ ಕೊಟ್ಟ ಪ್ರೋತ್ಸಾಹ ಮಹತ್ವಪೂರ್ಣ. ಈ ಕಾಂಗ್ರೆಸ್ ಅಧಿವೇಶನದ ಸ್ಥಳಕ್ಕೆ ವಿಜಯನಗರವೆಂದು ಕರೆಯಲಾಗಿತ್ತು. ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಗಳನ್ನು ಪ್ರತಿಬಿಂಬಿಸಲು ಸರ್ವ ಯತ್ನ ಮಾಡಲಾಗಿತ್ತು.

ಇದರಲ್ಲಿ ಭಾಗವಹಿಸಿದ ಅಸಂಖ್ಯಾತ ಕನ್ನಡಿಗರು ಕಾಂಗ್ರೆಸ್ಸಿನ ಮಹಾ ನಾಯಕರ ದರ್ಶನವನ್ನು ಮಾಡಿದ್ದು ಅಲ್ಲದೆ ತಮ್ಮ ಗತಕಾಲದ ವೈಭವವನ್ನು ಮೆಲುಕು ಹಾಕುವಂತಾಯಿತು. ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿಯೇ ಕರ್ನಾಟಕದ ಮೊಟ್ಟ ಮೊದಲ ಏಕೀಕರಣ ಸಭೆ ಸಿದ್ದಪ್ಪ ಕಂಬಳಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಇದೇ ಸಂದರ್ಭದಲ್ಲಿ ಹುಯಿಲಗೋಳ ನಾರಾಯಣರಾಯರು ರಚಿಸಿರುವ ನಾಡಗೀತೆಯೆ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಗಮಕ ಕಾಳಿಂಗ ರಾಯರು ಸುಶ್ರಾವ್ಯವಾಗಿ ಹಾಡಿರುವ ಈ ಗೀತೆ ಧ್ವನಿಮುದ್ರಿತವಾಗಿ ಕನ್ನಡಿಗರ ಮನ ಮನೆಯನ್ನು ಈಗ ಸೇರಿದೆ.

**ಹುಯಿಲಗೋಳ ನಾರಾಯಣರಾಯರು ರಚಿಸಿರುವ ನಾಡಗೀತೆ ಹೀಗಿದೆ;**

***ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು***

***ಬದುಕು ಬಲುಹೀನ ನಿಧಿಯ ಸದಾಭಿಮಾನದ ಗೂಡು***

***ರಾಜನ್ಯರಿಪು ಪರಶುರಾಮ ನಮ್ಮನ ನಾಡು***

***ಆ ಜಲದೇನೆ ಜಗಿದ ಹನುಮ ಮಥಿಸಿದ ನಾಡು***

***ಓಜಯಿಂ ಮೆರೆದರಸುಗಳ ಸಾಹಸದ ಬೀಡು***

***ತೇಜವನು ನಮಗಿವ ವೀರ ವೃಂದದ ಬಿಡು***

*ಲೆಕ್ಕ ಗಮಿತಾಕ್ಷರರು ಬೆಳೆದು ಮೆರೆದಿರು ನಾಡು*

*ಜಕ್ಕಣ್ಣನ ಶಿಲ್ಪ ಕಲೆಯ ಅಚ್ಚರಿಯ ಕರುನಾಡು*

*ಪಕ್ಕ ಮತಗಳ ಸಾರಿದವರಿಗಿದು ನೆಲೆಬೀಡು*

*ಚೊಕ್ಕ ಮತಗಳ ಸಾರಿದವರಿಗಿದು ನೆಲೆವೀಡು*

*ಬೊಕ್ಕಸದ ಕಣಜವೈ ವಿದ್ವತೆಯ ಕಾಡು*

*ಪಾವನೆಯರ ಕೃಷ್ಣ ಭೀಮೆಯರ ತಾಯಿನಾಡು*

*ಕಾವೇರಿ ಗೋಧಿಯರ ಮೈದೊಳವ ವಲು ನಾಡು*

*ಕಾವ ಗದುಗಿನ ವೀರನಾರಾಯಣನ ಬೀಡು*

ಹೀಗೆ ನಾರಾಯಣ ರಾಯರು ನಾಡಗೀತೆಯನ್ನು ಬಹಳ ಸ್ವಾರಸ್ಯಕರವಾಗಿ ಕರ್ನಾಟಕದ ಪರಂಪರೆಯನ್ನು ಬಿಂಬಿಸುವ ಸುಂದರ ಪದಗಳ ಗುಚ್ಚವನ್ನು ನೀಡಿದ್ದಾರೆ.

**ಸಾಧನೆಗಳು ಮತ್ತು ಪ್ರಶಸ್ತಿ**

ಹುಯಿಲಗೋಳ ನಾರಾಯಣರಾವ್ ಅವರು ನಾಟ್ಯ ವಿಲಾಸಿ ಮಿತ್ರರ ಸಹಕಾರದೊಂದಿಗೆ ಗದಗಿನ ವಿದ್ಯಾದಾನ ಸಮಿತಿಯ ಪ್ರೌಢಶಾಲೆ ಸ್ಥಾಪನೆ ಮಾಡಿದ್ದರು. ಜೊತೆಗೆ ಅವರು ಗದಗಿನ ಎರಡು ದೇವಸ್ಥಾನಗಳ ಜೀರ್ಣೋದ್ಧಾರ ಮಾಡಿದ್ದು, ಯಂಗ್ ಮೆನ್ಸ್ ಪುಟ್ಬಾಲ್ ಕ್ಲಬ್ ಅನ್ನು ಸ್ಥಾಪಿಸಿದರು.

ಹುಯಿಲಗೋಳ ನಾರಾಯಣರಾವ್ ಅವರಿಗೆ 1925ರಲ್ಲಿ ಗದಗ–ಬೆಟಗೇರಿ ನಾಗರಿಕರಿಂದ ಸನ್ಮಾನ ಮಾಡಲಾಯಿತು. 1956ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಹುಯಿಲಗೋಳ ನಾರಾಯಣರು ರಚಿಸಿದ "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಗೀತೆ ಕರ್ನಾಟಕ ರಾಜ್ಯದ ನಾಡಗೀತೆಯೆಂದು ಖ್ಯಾತಿ ಪಡೆದಿತ್ತು. ಈ ಗೀತೆಯನ್ನು ಬೆಳಗಾವಿಯಲ್ಲಿ ಜರುಗಿದ, 1924ರ ಕಾಂಗ್ರೆಸ್ ಅಧಿವೇಶನದಲ್ಲಿ ಹಾಡಲಾಗಿತ್ತು. ಮಹಾತ್ಮ ಗಾಂಧಿಯವರು ಈ ಅಧಿವೇಶನದ ಅಧ್ಯಕ್ಷರಾಗಿದ್ದರು. ಆಗಿನ್ನೂ ಬಾಲಕಿಯಾಗಿದ್ದ ದಿವಂಗತ ಗಂಗೂಬಾಯಿ ಹಾನಗಲ್ ಈ ಗೀತೆಯನ್ನು ಅಂದು ಹಾಡಿದ್ದರು. ಇಂದೂ ಕೂಡ ಈ ಹಾಡು ಕನ್ನಡಿಗರ ಹೃದಯದಲ್ಲಿ ನೆಲೆ ನಿಂತಿದೆ.[2]

ಕನ್ನಡದ ಶ್ರೇಷ್ಠ ಕವಿ, ಸ್ವಾತಂತ್ರ್ಯ ಹೋರಾಟಗಾರ, ಉತ್ತಮ ವಾಗ್ಮಿ, ಶ್ರೇಷ್ಠ ನಾಟಕಕಾರರೂ, ನಟರೂ, ಚಿಂತಕರೂ ಹೀಗೆ ಬಹುಮುಖ ಪ್ರತಿಭೆಯ ಮೇರು ವ್ಯಕ್ತಿಗಳಾಗಿದ್ದಂತಹ ಹುಯಿಲಗೋಳ ನಾರಾಯಣರಾಯರು ತಮ್ಮ ಕೃತಿಗಳು ಮತ್ತು ನಾಡಸೇವೆಗಳ ಮೂಲಕವೇ, ಇಂದಿಗೂ ಸಮಸ್ತ ಕನ್ನಡಿಗರ ಹೃದಯದಲ್ಲಿ ನೆಲೆ ನಿಂತಿದ್ದು, 100 ವರ್ಷಗಳ ಹಿಂದೆ ಬರೆದ ಅವರ ಆ ಒಂದು ಗೀತೆಯು ಇಂದಿಗೂ

[2] https://www.sallapa.com/2020/10/on-birth-anniversary-of-our-great-poet.html

ಕನ್ನಡಿಗರಲ್ಲಿ ಚೈತನ್ಯವನ್ನು ತುಂಬುವಂತೆ ಮಾಡುವುದೇ ಅವರ ಸಾರ್ವಕಾಲಿಕತೆಗೆ ಸಾಕ್ಷಿಯಾಗಿದ್ದು ಈ ಎಲ್ಲ ಕಾರಣಗಳಿಂದಾಗಿ ಅವರು ನಮ್ಮ ಹೆಮ್ಮೆಯ ಕನ್ನಡದ ಕಲಿಗಳೇ ಸರಿ.[3]

ಸರಳ ಜೀವಿಗಳಾದ ಇವರು ಯಾವುದೇ ಏರಿಳಿತಗಳಿಲ್ಲದೆ ಶಾಂತ, ಗಂಭೀರ ಜೀವನ ನಡೆಸಿದರು. ತಮ್ಮ ವಿವೇಕದಿಂದ ಜೀವನವನ್ನು ಚೆನ್ನಾಗಿ ಸಮಂಜಸವಾಗಿ ರೂಢಿಸಿಕೊಂಡ ಇವರು ತಮ್ಮ ವೃತ್ತಿಯಲ್ಲೂ ಸೌಜನ್ಯ ಮಾರ್ದವತೆ, ಕೋಮಲ ಸ್ವಭಾವಗಳಿಂದ ಪ್ರಸಿದ್ಧರಾಗಿದ್ದರು. ಕರ್ನಾಟಕದ ಏಕೀಕರಣ ಸಭೆ ಹಲವಾರು ಗೊತ್ತುವಳಿಗಳನ್ನು ಅಂಗೀಕರಿಸಿ ಕರ್ನಾಟಕದ ಐಕ್ಯತೆಗಾಗಿ ದೃಢ ಹೋರಾಟ ನಡೆಸಲು ನಿರ್ಧರಿಸಿದರು. ಇದಾದ ಮೇಲೆ ಇಂತಹ ಹಲವಾರು ಸಮ್ಮೇಳನಗಳು ಬಳ್ಳಾರಿ ಧಾರವಾಡ ಬೆಳಗಾಂ ಹುಕ್ಕೇರಿ, ಸೊಲ್ಲಾಪುರ ಬೊಂಬಾಯಿಗಳಲ್ಲಿ ನಡೆದವು. ಇವು ಕನ್ನಡ ಜನರನ್ನು ಏಕೀಕರಣಕ್ಕಾಗಿ ಸಂಘಟಿಸುವಲ್ಲಿ ಮಹತ್ವದ ಪಾತ್ರ ವಹಿಸಿದವು. ಹುಯಿಲಗೋಳ ನಾರಾಯಣರಾವ್ ಅವರು ಜುಲೈ 4, 1971 ರಂದು ಗದಗಿನಲ್ಲಿ ತಮ್ಮ 86ನೇ ವಯಸ್ಸಿನಲ್ಲಿ ನಿಧನರಾದರು. ಇವರು ಸಾಹಿತ್ಯ ಲೋಕಕ್ಕೆ ನೀಡಿರುವ ಕೊಡುಗೆ ಇಂದಿಗೂ ಸ್ಮರಣೀಯ.

**ಆಕರ ಗ್ರಂಥಗಳು**


- ವಿಶ್ವ ಸಂವಾದ ಕೇಂದ್ರ, ಕರ್ನಾಟಕ, https://vskkarnataka.org/huyilagol-narayan-rao-jayanthi-2024/
- https://www.sallapa.com/2020/10/on-birth-anniversary-of-our-great-poet.html
- https://kn.wikisource.org/wiki
- ಪ್ರಜಾವಾಣಿ ದಿನಪತ್ರಿಕೆ
- ಕನ್ನಡ ಪ್ರಭ ದಿನಪತ್ರಿಕೆ
- ವಿಜಯ ಕರ್ನಾಟಕ ದಿನಪತ್ರಿಕೆ


[3] https://enantheeri.com/2025/11/01/narayana_rayaru/